ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

**ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆ ೫೭) ನಮೂನೆ ಸಂಖ್ಯೆ ೪ (ಸಿವಿಲ್)**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಇವರ ನ್ಯಾಯಾಲಯದಲ್ಲಿ.**
**ಸಿ.ಸಿ. ನಂಬರ್ ೧೧೮೦-೨೦೧೫**

.ವಿರುದ್ದ

ಪಿ.ಡಬ್ಲ್ಯೂ:-೫
ಸಿ.ಡಬ್ಲ್ಯೂ:-೮

ಹೆಸರು : ಕೆ.ನಾರಾಯಣ
ತಂದೆಯ ಹೆಸರು : ಕರಿನಾಗಯ್ಯ
ವಯಸ್ಸು : ೬೪ ವರ್ಷ
ಉದ್ಯೋಗ : ನಿವೃತ್ತ ಪಿ.ಎಸ್.ಐ
ವಾಸಸ್ಥಳ : ಹೊಸಕೋಟೆ

ದಿ: ೨೫-೧೧-೨೦೨೪ ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: ೧.೯.೨೦೧೫ ರಿಂದ ದಿ:೩೧.೯.೨೦೧೫ ವರೆಗೆ ಅನುಗೊಂಡನಹಳ್ಳಿ ಪೊ.ಠಾಣೆಯಲ್ಲಿ ಪ್ರಭಾರ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: ೧೭.೯.೨೦೧೫ ರಂದು ಮಧ್ಯಾಹ್ನ ೧೨.೩೦ ಗಂಟೆ ಸಮಯದಲ್ಲಿ ಠಾಣಾ ಕರ್ತವ್ಯದಲ್ಲಿದ್ದಾಗ ಚಾ.ಸಾ.೧ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಪಿರ್ಯಾದನ್ನು ಸ್ವಿಕರಿಸಿಕೊಂಡು, ಠಾಣಾ ಅಪರಾಧಿಕ ಕ್ರಮ ಸಂಖ್ಯೆ ೯೦-೨೦೧೫ ಭಾ.ದಂ.ಸಂ.ಕಲಂ ೫೦೪,೩೨೩,೪೪೮,೨೯೫(ಎ),೪೨೭ ಮತ್ತು ೫೦೬ ಸಹವಾಚಕ ೩೪ ರಡಿಯಲ್ಲಿ ಪ್ರಥಮ ವರ್ತಮಾನ ವರದಿ ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾ.ಸಾ.೫ ಮತ್ತು ೬ ರವರ ಸಮಕ್ಷಮ ಚಾ.ಸಾ.೧ ರವರು ಸ್ಥಳ ತೋರಿಸಿದಂತೆ ಮಧ್ಯಾಹ್ನ ೩.೩೦ ರಿಂದ ೪.೧೫ ಗಂಟೆಯವರೆಗೆ ಮಹಜರನ್ನು ಜರುಗಿಸಿ ಹೊಡೆದು ಹೋಗಿದ್ದ ಮುಸ್ಲಿಂ ಜನಾಂಗದ ಫೋಟೊವನ್ನು ಸ್ವಾಧೀನಪಡಿಸಿಕೊಂಡು ಸ್ವತ್ತು ಪಟ್ಟಿ ಸಂಖ್ಯೆ ೪೮/೨೦೧೫ ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾ.ಸಾ. ೨ ರಿಂದ ೪ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿತರನ್ನು ದಸ್ತಗಿರಿ ಕ್ರಮ ಜರುಗಿಸಿ ನ್ಯಾಯಾಂಗ ಬಂಧನ ಕೋರಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿ: ೨೨.೯.೨೦೧೫ ರಂದು ತನಿಖೆಯನ್ನು ಪೂರೈಸಿ ಆರೋಪಿತರ

ವಿರುದ್ದ ಸಾಕಷ್ಟು ಸಾಕ್ಷ್ಯದಾರಗಳು ಲಭ್ಯವಾದ ಮೇರೆಗೆ ಭಾ.ದಂ.ಸಂ.ಕಲಂ ೫೦೪,೩೨೩,೪೪೮,೨೯೫(ಎ),೪೨೭ ಮತ್ತು ೫೦೬ ಸಹವಾಚಕ ೩೪ ರಡಿಯಲ್ಲಿ ಅಂತಿಮ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಈಗ ನನಗೆ ತೋರಿಸಿದ ನಿಪಿ.೧ ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ಸ್ವಿಕರಿಸಿಕೊಂಡ ಪಿರ್ಯಾದು ಆಗಿರುತ್ತದೆ. ನಿಪಿ. ೧ ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.೧(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ನ್ಯಾಯಾಲಯಕ್ಕೆ ನಿವೇದಿಸಿಕೊಂಡ ಪ್ರಥಮ ವರ್ತಮಾನ ವರದಿ ಆಗಿರುತ್ತದೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ.೬ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೬(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಪಿ.೨ ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ಜರುಗಿಸಿದ ಮಹಜರ್ ಆಗಿರುತ್ತದೆ. ನಿಪಿ. ೨ ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.೨(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಪಿ.೩ ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ದಾಖಲಿಸಿಕೊಂಡ ಚಾ.ಸಾ.೩ ರವರ ಹೇಳಿಕೆ ಆಗಿರುತ್ತದೆ. ನಿಪಿ. ೩ ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.೩(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಪಿ.೪ ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ದಾಖಲಿಸಿಕೊಂಡ ಚಾ.ಸಾ.೪ ರವರ ಹೇಳಿಕೆ ಆಗಿರುತ್ತದೆ. ನಿಪಿ. ೪ ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.೪(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಪಿ.೫ ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ದಾಖಲಿಸಿಕೊಂಡ ಚಾ.ಸಾ.೨ ರವರ ಹೇಳಿಕೆ ಆಗಿರುತ್ತದೆ. ನಿಪಿ. ೫ ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.೫(ಎ) ಎಂದು ಗುರುತಿಸಲಾಯಿತು. ಸದರಿ ದಿನ ನಾನು ನಿಪಿ.೨ ರಡಿಯಲ್ಲಿ ಸ್ವಾಧೀನ ಪಡಿಸಿಕೊಂಡ ಸ್ವತ್ತನ್ನು ಮತ್ತು ದಸ್ತಗಿರಿ ಕ್ರಮ ಜರುಗಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ನಿಪಿ.೨ ರಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಸ್ವತ್ತು ಇರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ೧ನೇ ಆರೋಪಿ ಸದರಿ ದಿನ ನಾನು ದಸ್ತಗಿರಿ ಕ್ರಮ ಜರುಗಿಸಿದ ಇಬ್ಬರು ಆರೋಪಿತರ ಪೈಕಿ ಒಬ್ಬರು ಆಗಿರುತ್ತಾರೆ. ಈ ದಿನ ೨ನೇ ಆರೋಪಿಯು ಗೈರು ಹಾಜರಿದ್ದು ಆರೋಪಿ ಪರ ವಕೀಲರು ೨ನೇ ಆರೋಪಿಯನ್ನು ಗುರುತಿಸುವ ಕುರಿತು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

<u>**ಪಾಟೀ ಸವಾಲು:**</u> ಆರೋಪಿತರ ಪರ ಶ್ರೀ. ಎ.ಎನ್.ಎಸ್. ವಕೀಲರಿಂದ

ಸದರಿ ದಿನ ಮಧ್ಯಾಹ್ನ **೧೨.೦೦** ಗಂಟೆಗೆ ಚಾ.ಸಾ.೧ ರವರು ಠಾಣೆಗೆ ಬಂದಿದ್ದರು ಸದರಿ ದಿನ ಚಾ.ಸಾ.೧ ರವರೊಂದಿಗೆ ಚಾ.ಸಾ. **೪** ಮತ್ತು ಇನ್ನೊಬ್ಬರು ಬಂದಿದ್ದರು. ಆ ರೀತಿ ಬಂದಿದ್ದರು ಎಂದು ಹೇಳುವ ಇನ್ನೊಬ್ಬ ವ್ಯಕ್ತಿಯ ಹೆಸರು ನನಗೆ ನೆನಪಿಲ್ಲ. ಸಾಮಾನ್ಯವಾಗಿ ಯಾವುದೇ ದೂರು ದಾಖಲಾದಾಗ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಘಟನೆ ಸ್ಥಳಕ್ಕೆ ಭೇಟಿ ನೀಡಿ ಖಚಿತ ಪಡಿಸಿಕೊಂಡು ಪ್ರಕರಣ ನೊಂದಾಯಿಸಲಾಗುತ್ತದೆ ಎಂದರೆ ಸರಿಯಲ್ಲ. ಸದರಿ ದಿನ ನಾನು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿದ್ದೇನೆ ಎಂದು ಹೇಳುವ ಸಮಯದಲ್ಲಿ ನನ್ನೊಂದಿಗೆ ಠಾಣಾ ಬರಹಗಾರರು ಬಂದಿದ್ದರು ಮತ್ತು ಅವರ ಹೆಸರು ನನಗೆ ನೆನಪಿಲ್ಲ. ನಿಪಿ.೨ ಜರುಗಿಸುವ ಪೂರ್ವದಲ್ಲಿ ಪಂಚರರಿಗೆ ನೋಟಿಸು ನೀಡಿದ್ದೆ. ಸದರಿ ದಿನ ನಾನು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿದ್ದೆ ಎಂದು ಹೇಳುವ ಸಮಯದಲ್ಲಿ ಸಾರ್ವಜನಿಕರು ಸೇರಿದ್ದರು ಮತ್ತು ಅವರುಗಳ ಹೆಸರು ನನಗೆ ಗೊತ್ತಿಲ್ಲ. ನಾನು ಭೇಟಿ ನೀಡಿದ್ದೆ ಎಂದು ಹೇಳುವ ತಕ್ಷೀರು ಸ್ಥಳವು ದೊಡ್ಡದುನ್ನಸಂದ್ರ ಗ್ರಾಮದ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ತಕ್ಷೀರು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ನಿಪಿ.೨ ನ್ನು ಠಾಣೆಯಲ್ಲಿಯೇ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅಂತಿಮ ವರದಿಯಲ್ಲಿ ಕಾಣಿಸಿರುವಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಮತ್ತು ಚಾ.ಸಾ.೧ ರವರು ನೀಡಿದ ಸುಳ್ಳು ಪಿರ್ಯಾದಿಗೆ ಅನುಗುಣವಾಗಿ ಅಂತಿಮ ವರದಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡದೇ ಸುಳ್ಳು ಅಂತಿಮ ವರದಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ೧ನೇ ಆರೋಪಿಯನ್ನು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>**: -ಇಲ್ಲ-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**